ತಾವೇ ಖುದ್ದಾಗಿ ಹೋಗಿ ಪರಿಶೀಲನೆ ಮಾಡತಕ್ಕ ಅವಶ್ಯಕತೆ ಇದೆ. ಏಕೆಂದರೆ, ಇದು ಅರಣ್ಯ ಸಂಪತ್ತು ಲೂಟಿಯಾಗುತ್ತಾ ಇರತಕ್ಕಂಥಾದ್ದು. ಅರಣ್ಯ ಸಂಪತ್ತನ್ನು ರಕ್ಷಣೆ ಮಾಡುವುದರಲ್ಲಿ ತಾವು ಬಹಳ ಕಾಳಜಿ ವಹಿಸುತ್ತಿದ್ದೀರಿ, ಸಂತೋಷ. ಇದಕ್ಕೆ ನಾವು ಸಲಹೆ ಕೊಡುತ್ತಾ ಇದ್ದೇವೆ. ತಾವು ಖುದ್ದಾಗಿ ನೋಡಿ. ಸರಿಯಾದಂಥ ಅಧಿಕಾರಿಗಳನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿ ನೋಡಿ. ಮತ್ತು ಇದರಲ್ಲಿ ಏನೊ ನಡೆದಿದೆ, ನಡೆಯದೇ ಇದ್ದರೆ ೬೩ ಸಾವಿರ ರೂಪಾಯಿ ಏಕೆ ಕಟ್ಟಿಸಿಕೊಂಡರು, ೬೩ ಸಾವಿರ ರೂಪಾಯಿ ಸಣ್ಣ ಮೊತ್ತವೇನಲ್ಲ, ೬೩ ಸಾವಿರ ರೂಪಾಯಿ ದೊಡ್ಡ ಮೊತ್ತ. ಇದನ್ನು ಕಟ್ಟಬೇಕಾಗಿದ್ದರೆ ಕಾರಣವಿದೆ. ಮತ್ತು, ನಾನು ಮೊದಲೇ ಹೇಳಿದಹಾಗೆ, ಈ ಮಾಫಿ ಪಾಸ್ ಕೊಡುವುದಕ್ಕೆ ಮೊದಲೇ ದಾಖಲೆಯಲ್ಲಿ ನಮೂದಿಸಿರುತ್ತಾರೆ, ಇದನ್ನು ದಯವಿಟ್ಟು ತಾವು ತನಿಖೆ ಮಾಡಬೇಕು.

ಅಧ್ಯಕ್ಷರು.—ಅದನ್ನು ಪರಿಶೀಲನೆ ಮಾಡುತ್ತಾರೆ. ಯು.ಕೆ. ಶಾಮಣ್ಣ,

ಶ್ರೀ ಎಂ. ಪಿ. ವೆಂಕಟೇಶ್.—ಅಧ್ಯಕ್ಷರೆ, ಒಂದು ನಿಮಿಷ,

ಅಧ್ಯಕ್ಷರು.—ಯು. ಕೆ. ಶಾಮಣ್ಣ, ಕೊಶ್ಚನ್ ನಂಬರ್ ೩೫೪.

ಶ್ರೀ ಎಂ. ಪಿ. ವೆಂಕಟೇಶ್,—ಇವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳದೇ ಇದ್ದರೆ ಇವರಿಂದ ಬೇರೆಯವರಿಗೆ ಜಮೀನು ಮಾರಿಬಿಟ್ಟು ಕೇರಳಕ್ಕೆ ಹೊರಟು ಹೋಗುತ್ತಾರೆ.

ಅಧ್ಯಕ್ಷರು.—ನಾನು ಶ್ರೀ ಶಾಮಣ್ಣ ಅವರನ್ನು ಕರೆದಿದ್ದೇನೆ.

ಶ್ರೀ ಯು. ಕೆ. ಶಾಮಣ್ಣ.—ಮಾನ್ಯ ಅಧ್ಯಕ್ಷರೆ, ನಾನು ೧೦೬೩ನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್,—ನಿಧಾನವಾದರೆ ಈ ಜಮೀನು ಮಾಲೀಕರು ಜಮೀನು ಮಾರಿ ಕೇರಳಕ್ಕೆ ಹೋಗುತ್ತಾರೆ. ಇದು ಬಹಳ ಮುಖ್ಯವಾದ ಪ್ರಶ್ನೆ,

MR. SPEARKER.—That is left to him. Rules are there. He can exercise his right as a Member of this House. ಈ ಸದನದಲ್ಲಿ ಬರುವ ಪ್ರತಿಯೊಂದು ಪ್ರಶ್ನೆಯೂ ಮುಖ್ಯವೇ.

ಕರ್ನಾಟಕ ಭೂ ಸೇನಾ ನಿಗಮದಿಂದ ಕಳಪೆ ಮನೆಗಳ ನಿರ್ಮಾಣ

೧೦೬೩. ಶ್ರೀ ಯು. ಕೆ. ಶಾಮಣ್ಣ (ಶೃಂಗೇರಿ).— ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಮಂತ್ರಿ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಲವು ನಿರ್ಮಾಣ ಕಾರ್ಯಗಳನ್ನು ಭೂ ಸೇನಾ ವಹಿಸಿರುವುದು ನಿಜವೇ ?

ಆ) ಈ ಕಾರ್ಯಗಳು ಅಸಮರ್ಪಕವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ನಿಗಮವು ಶೃಂಗೇರಿ, ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕಿನಲ್ಲಿ ಕಟ್ಟಿರುವ ಬಹುತೇಕ ಮನೆಗಳು ಶೌಚಾಲಯಗಳು, ಕಳಪೆ ಮಟ್ಟದಾಗಿದ್ದು ಹಾಗೂ ಅವುಗಳು ಬಿದ್ದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ಚಿಕ್ಕಮಗಳೂರು ಜಿಲ್ಲಾ ಪರಿಷತ್‌ನವರು ಕೆಲವು ದೂರುಗಳು ನೀಡಿರುವುದು ಈಗ ಸರ್ಕಾರದ ಗಮನಕ್ಕೆ ಬಂದಿದೆ.

ಈ) ಕರ್ನಾಟಕ ಭೂಸೇನಾ ನಿಗಮದವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಯು. ಕೆ. ಶಾಮಣ್ಣ.— ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಲ್ಯಾಂಡ್ ಆರ್ಮಿ ಬಗ್ಗೆ ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಿದಾಗ ಕರ್ನಾಟಕ ಭೂಸೇನಾ ನಿಗಮದವರು ಸೂಕ್ತ ಕ್ರಮ ತೆಗೆದು ಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ನನ್ನ ಕ್ಷೇತ್ರವಾದ ಶೃಂಗೇರಿಯಲ್ಲಿ ಈಗ ಮಳೆ ಪ್ರಾರಂಭವಾಗಿ ಒಂದು ತಿಂಗಳು ೧೫ ದಿವಸ ಆಗಿದೆ. ಪ್ರತಿ ದಿವಸ ೧–೨ ಇಂಚು ಮಳೆ ಬೀಳುತ್ತಿಕ್ಕೆ ಪ್ರದೇಶದಲ್ಲಿ ಲ್ಯಾಂಡ್ ಆರ್ಮಿ ಕಟ್ಟಿರುವ ಮನೆಗಳು ಬಿದ್ದು ಹೋಗುತ್ತಾಇವೆ. ಇದರ ಬಗ್ಗೆ ಎಷ್ಟು ಹಣ ಖರ್ಚಾಗಿದೆ ಎಂದು ಕೇಳಿದೆ. ಕಟ್ಟಿರುವಂಥ ಮನೆ ಕಳಪೆ ದರ್ಜೆಯದಾಗಿದೆ ಎಂದು ನಾನು ಕೇಳಿದ್ದೆ. ಈಗ ಮೂತ್ರಿಗಳನ್ನು ಕಟ್ಟಿದ್ದಾರೆ; ಹಸಿ ಇಟ್ಟಿಗೆಯಲ್ಲಿ ಕಟ್ಟಿದ್ದಾರೆ. ಒಳ್ಳೆಯ ಕ್ವಾಲಿಟಿಯ ಇಟ್ಟಿಗೆಯಲ್ಲಿ ಕಟ್ಟಿಲ್ಲ. ೬ ತಿಂಗಳ ಹಿಂದೆ ೩೦–೪೦ ಸಾವಿರ ಖರ್ಚು ಮಾಡಿ ಕಟ್ಟಿರತಕ್ಕ ಮನೆಗಳು ಬಿದ್ದು ಹೋಗಿವೆ. ಹಾಗೆಯೇ ಎನ್. ಆರ್. ಪುರದಲ್ಲಿ ಕಟ್ಟಿರುವ ಮನೆಗಳು ಬಿದ್ದು ಹೋಗಿವೆ.

ಅಧ್ಯಕ್ಷರು.— ತಾವು ಪ್ರಶ್ನೆ ಕೇಳಿ.

ಶ್ರೀ ಶಾಮಣ್ಣ.— ಈ ರೀತಿ ಬಿದ್ದು ಹೋಗಿರುವಂಥ ಮನೆಗಳಿಗೆ ಆಗಿರುವ ಲಾಸ್ ಯಾರು ಕೊಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಭೂಸೇನಾ ನಿಗಮದವರು ಮನೆಗಳನ್ನು ಕಟ್ಟುವುದು ಎಂದು ಜಿಲ್ಲಾ ಪರಿಷತ್‌ನಲ್ಲಿ ತೀರ್ಮಾನ ಕೈಗೊಂಡಿದ್ದೇವೆ. ಸರ್ಕಾರಕ್ಕೆ ಈ ಬಗ್ಗೆ ಮಾಹಿತಿ ಬಂದಿದೆಯೇ ? ಬಂದಿದ್ದರೆ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ನಾನು ತಿಳಿಯಬಯಸುತ್ತೇನೆ;

ಶ್ರೀ ಎಂ. ವೈ. ಘೋರ್ಪಡೆ.— ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚು ಕಡಿಮೆ ಒಂದು ಸಾವಿರ ಮನೆಗಳನ್ನು ಲ್ಯಾಂಡ್ ಆರ್ಮಿ ಮುಖಾಂತರ ನಾವು ಕಟ್ಟಿಸಿದ್ದೇವೆ. ಮೂರು ತಾಲ್ಲೂಕುಗಳಲ್ಲಿ ಕಳೆದ ಮೂರು ವರ್ಷದಿಂದ ಅಂದರೆ, ೮೭–೮೮–೮೯ ರಲ್ಲಿ ಸಾಕಷ್ಟು ಮನೆಗಳನ್ನು ಶೃಂಗೇರಿ, ಕೊಪ್ಪ ಹಾಗೂ ನರಸಿಂಹರಾಜಪುರಗಳಲ್ಲಿ ಕಟ್ಟಿಸಲಾಗಿದೆ. ಜಿಲ್ಲಾ ಪರಿಷತ್‌ನವರು ೨೫–೫–೯೦ ರಲ್ಲಿ ರಿವ್ಯೂ ಮಾಡಿ, ೧೦ ಮನೆಗಳು ರಿಪೇರಿಯಾಗಬೇಕಾಗಿದೆ ಇವು ಸರಿಯಿಲ್ಲವೆಂದೂ; ಶೃಂಗೇರಿ ತಾಲ್ಲೂಕು ಕಾವಡಿ ಗ್ರಾಮದಲ್ಲಿ ೧೦ ಮನೆಗಳು ಹೀಗಾಗಿದೆಯೆಂದೂ ತಿಳಿಸಿದ್ದಾರೆ. ಅದೇ ರೀತಿ ನರಸಿಂಹರಾಜಪುರ ತಾಲ್ಲೂಕು ಹಾಣಿಸೆಕೊಪ್ಪದಲ್ಲಿ ೫ ಮನೆಗಳು ರಿಪೇರಿಯಾಗಬೇಕೆಂದು ತಮ್ಮ ಮುಂದೆ ವಾಹಿತಿ ಇದೆ. ಇವು ೮೫–೮೬ರಲ್ಲಿ ಕಟ್ಟಿಸಿರುವಂಥ ಮನೆಗಳು; ಇವುಗಳಲ್ಲಿ ಏನಾದರು ದೋಷ ಉಂಟಾದರೆ, ಒಂದು ವರ್ಷದ ಅವಧಿಯಲ್ಲಿ ಲ್ಯಾಂಡ್ ಆರ್ಮಿಯವರು ಸರಿಪಡಿಸುವಂಥ ಜವಾಬ್ದಾರಿ ಅವರ ಮೇಲಿದೆ. ಆದರೂ ಸಹ ಮಾನ್ಯ ಸದಸ್ಯರು ಈ ಪ್ರಶ್ನೆ ಎತ್ತಿರುವುದರಿಂದ ಈ ಎರಡೂ ಕಡೆಗಳಲ್ಲಿ ದೋಷ ಇದ್ದರೆ ತಕ್ಷಣ ಸರಿಪಡಿಸುತ್ತೇವೆಂದು ಲ್ಯಾಂಡ್ ಆರ್ಮಿಯವರಂ ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು.— ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ತಮಗೆ ನಾನೊಂದು ಪತ್ರ ಬರೆದಿದ್ದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರೋಸ್ಟರ್ ಪದ್ಧತಿ ಮೂಲಕ ಕೆದ್ವಾಯಿ ಆಸ್ಪತ್ರೆಯಲ್ಲಿ ಮಾಡಿಕೊಂಡ ನೇಮಕಾತಿಗಳ ಬಗ್ಗೆ

೯೦೩. ಶ್ರೀಮತಿ ಮೋಟಮ್ಮ (ಮೂಡಿಗೆರೆ).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಕಳೆದ ೩ ವರ್ಷಗಳಿಂದ ನೇಮಕ ಮಾಡಲಾಗಿರುವ ಸಿಬ್ಬಂದಿ ವರ್ಗದವರ ಒಟ್ಟು ಸಂಖ್ಯೆ ಎಷ್ಟು ?

ಆ) ಈ ನೇಮಕಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೩೮೦ ಪರ್ಗಾವಾರು ವಿವರಗಳನ್ನು ಇದಕ್ಕೆ ಲಗತ್ತಿಸಿದ ಅನುಬಂಧದಲ್ಲಿ ಕೊಟ್ಟಿದೆ.

ಆ) ಹೌದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.